# ವಿವಿಧ ಉಪದೇಶಗಳು



✷ ವಿಷಮ ಶೀತಜ್ವರದ ರೋಗಿಗೆ ಆಹಾರದಲ್ಲಿ ರುಚಿಯೇ ಇಲ್ಲದೆ ಹೋಯಿತು ಎಂದರೆ ಆತ ಬದುಕುವಂತೆಯೇ ಇಲ್ಲ; ಆದರೆ ಲೇಶಮಾತ್ರವಾದರೂ ರುಚಿ ಇದ್ದದ್ದೇ ಆದರೆ ಅವನ ಸಂಬಂಧವಾಗಿ ಆಸೆಯನ್ನು ಬಿಟ್ಟುಬಿಡಬೇಕಾಗಿಲ್ಲ. ಆದ್ದರಿಂದ ಆತನ ನಾಮದಲ್ಲಿ ರುಚಿ ಬೆಳೆಸಿಕೊಳ್ಳಬೇಕು. ಭಗವನ್ನಾಮವನ್ನು ಜಪಿಸಬೇಕು – ದುರ್ಗಾನಾಮವೊ, ಕೃಷ್ಣ ನಾಮವೊ, ಶಿವನಾಮವೊ ಯಾವುದಾದರೂ ಸರಿಯೆ. ನಾಮಜಪ ಮಾಡುತ್ತ ಮಾಡುತ್ತ ದಿನ ದಿನಕ್ಕೂ ಅನುರಾಗ ವೃದ್ಧಿಯಾಗುತ್ತಾ ಬರುತ್ತಿದ್ದರೆ, ಆನಂದ ದೊರಕುತ್ತಿದ್ದರೆ, ಇನ್ನು ಹೆದರಿಕೊಳ್ಳಬೇಕಾದ್ದೇನಿಲ್ಲ. ವಿಷಮಶೀತಜ್ವರ ಗುಣವಾಗಿಯೇ ಆಗುತ್ತದೆ; ಭಗವಂತನ ಕೃಪೆ ದೊರೆತೇ ದೊರೆಯುತ್ತದೆ.

✷ ಭಗವಂತನ ನಾಮಬೀಜದಲ್ಲಿ ಬಹಳ ಶಕ್ತಿ ಇದೆ. ಅದು ಅವಿದ್ಯೆಯನ್ನು ನಾಶಮಾಡಿಬಿಡುತ್ತದೆ. ಸಾಮಾನ್ಯವಾಗಿ ಬೀಜವೂ ಮೃದು, ಅದರ ಮೊಳಕೆಯೂ ಮೃದು. ಆದರೂ ಅದು ಗಟ್ಟಿ ನೆಲವನ್ನು ಭೇದಿಸಿಬಿಡುತ್ತದೆ. ನೆಲ ಒಡೆದು ಮೊಳಕೆಗೆ ದಾರಿ ಮಾಡಿಕೊಟ್ಟುಬಿಡುತ್ತದೆ.

✷ ವ್ಯಾಕುಲತೆ ಇತ್ತು ಎಂದರೆ ಎಲ್ಲಾ ಮಾರ್ಗದಿಂದಲೂ ಭಗವಂತನ ಸಾಕ್ಷಾತ್ಕಾರ ಪಡೆಯಬಹುದು. ಆದರೆ ನಿಷ್ಠೆ ಬೇಕು. ನಿಷ್ಠಾಭಕ್ತಿಯ ಇನ್ನೊಂದು ಹೆಸರು ಅವ್ಯಭಿಚಾರ ಭಕ್ತಿ. ಇದು ಒಂದೇ ಬುಡವಿರುವ ಮರ ನೇರವಾಗಿ ಮೇಲಕ್ಕೆ ಬೆಳೆದುಹೋದ ಹಾಗೆ. ವ್ಯಭಿಚಾರ ಭಕ್ತಿ ಬುಡದಿಂದಲೇ ನಾಲ್ಕೈದು ಕವಲಿರುವ ಹಾಗೆ. ಗೋಪಿಯರ ನಿಷ್ಠೆ ಅಂಥದು; ಅವರು ಹಳದಿ ಹೂವಿನ ಮಾಲೆ ಹಾಕಿಕೊಂಡಿದ್ದ, ಪೀತಾಂಬರಧಾರಿಯಾಗಿದ್ದ, ನವಿಲುಗರಿಯ ಕಿರೀಟ ಇಟ್ಟುಕೊಂಡಿದ್ದ, ಗೋವಳ ಕೃಷ್ಣನನ್ನು ಹೊರತು ಬೇರೆ ಯಾರನ್ನೂ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಮಥುರೆಯಲ್ಲಿ ರಾಜವೇಷಭೂಷಣದಲ್ಲಿದ್ದ, ತಲೆಗೆ ರುಮಾಲು ಸುತ್ತಿದ್ದ ಕೃಷ್ಣನನ್ನು ಕಂಡೊಡನೆಯೇ ಗೋಪಿಯರು ತಮ್ಮ ಮುಖಕ್ಕೆ ಸೆರಗು ಎಳೆದುಕೊಂಡರು. ಅವರು ತಮ್ಮೊಳಗೇ ಮಾತಾಡಿಕೊಂಡರು: 'ಇವನಾರಪ್ಪ ಇವನು? ಇವನೊಡನೆ ಮಾತುಕತೆಯಾಡಿ ನಾವು ಶ್ರೀಕೃಷ್ಣನಲ್ಲಿಟ್ಟಿರುವ ಏಕನಿಷ್ಠಾ ಪ್ರೀತಿಯನ್ನು ಕಳೆದುಕೊಳ್ಳೋಣವೆ?'

✷ ನಮ್ಮ ಧರ್ಮವೇ ಸರಿ, ಉಳಿದವರದೆಲ್ಲ ತಪ್ಪು, ಎಂಬ ಭಾವನೆ ಒಳ್ಳೆಯದಲ್ಲ. ಭಗವಂತ ಒಬ್ಬನೇ ವಿನಾ ಇಬ್ಬರಲ್ಲ. ಆತನನ್ನು ಭಿನ್ನ ಭಿನ್ನ ಹೆಸರಿನಿಂದ ಬೇರೆ ಬೇರೆ ಜನರು ಕರೆಯುತ್ತಾರೆ. ಕೆಲವರು ಆತನನ್ನು 'ಗಾಡ್' ಅಂತ ಕರೆಯುತ್ತಾರೆ. ಇನ್ನು ಕೆಲವರು 'ಅಲ್ಲಾ' ಎಂದು ಕರೆಯುತ್ತಾರೆ. ಇನ್ನೂ ಕೆಲಕೆಲವರು ಆತನನ್ನೇ 'ಕೃಷ್ಣ', 'ಶಿವ', 'ಬ್ರಹ್ಮ' ಹೀಗೆಲ್ಲಾ ಕರೆಯುತ್ತಾರೆ. ಉದಾಹರಣೆಗೆ ಕೊಳದ ನೀರು. ಒಂದು ಘಟ್ಟದವರು ಅದನ್ನು 'ಜಲ', ಇನ್ನೊಂದು ಘಟ್ಟದವರು 'ವಾಟರ್', ಮತ್ತೊಂದು ಘಟ್ಟದವರು 'ಪಾನಿ' ಎಂದು ಕರೆಯುತ್ತಾರೆ. ಹಿಂದುಗಳು ಅದನ್ನು 'ಜಲ', ಕ್ರಿಶ್ಚಿಯನ್ನರು 'ವಾಟರ್' ಮುಸಲ್ಮಾನರು 'ಪಾನಿ' ಅಂತ ಕರೆಯುತ್ತಾರೆ. ಆದರೆ ವಸ್ತು ಮಾತ್ರ ಒಂದೇ ಒಂದು. ಮತಗಳು ಕೇವಲ ಪಥಗಳು ಮಾತ್ರ. ಪ್ರತಿಯೊಂದು ಧರ್ಮವೂ ಭಗವಂತನ ಸಾಕ್ಷಾತ್ಕಾರಕ್ಕೆ ಒಂದೊಂದು ಮಾರ್ಗ. ಇದು ನದಿಗಳು ವಿವಿಧ ದಿಕ್ಕುಗಳಿಂದ ಹರಿದುಬಂದು ಎಲ್ಲವೂ ಸಾಗರದಲ್ಲಿ ಐಕ್ಯವಾಗುವ ಹಾಗೆ.

✷ ಉತ್ತಮ ಭಕ್ತ ಯಾರು ಗೊತ್ತೆ? ಯಾರು ಬ್ರಹ್ಮಜ್ಞಾನವನ್ನು ಪಡೆದುಕೊಂಡ ನಂತರ ಭಗವಂತನೇ ಈ ಜೀವ, ಜಗತ್ತು, ಚತುರ್ವಿಂಶತಿ ತತ್ತ್ವ ಆಗಿದ್ದಾನೆ ಎಂಬುದಾಗಿ ನೋಡುತ್ತಾನೋ ಆತ. ಮೊದಲು 'ನೇತಿ', 'ನೇತಿ', 'ಇದಲ್ಲ', 'ಇದಲ್ಲ' ಎಂದು ವಿಚಾರ ಮಾಡಿ ಚಾವಣಿಯನ್ನು ಮುಟ್ಟಬೇಕು. ಆಗ ಆತನಿಗೆ ಗೊತ್ತಾಗುತ್ತದೆ, ಚಾವಣಿ ಯಾವುದರಿಂದ – ಇಟ್ಟಿಗೆ, ಸುಣ್ಣ, ಇಟ್ಟಿಗೆ ಪುಡಿ – ತಯಾರಾಗಿದೆಯೋ ಅದೇ ವಸ್ತುಗಳಿಂದ ಮೆಟ್ಟಿಲ ಸಾಲೂ ತಯಾರಾಗಿದೆ ಎಂಬುದಾಗಿ. ಆಗ ಆತನಿಗೆ ತೋರಿಬರುತ್ತದೆ, ಬ್ರಹ್ಮನೇ ಜೀವ ಜಗತ್ತು ಸಮಸ್ತವೂ ಆಗಿದ್ದಾನೆ ಎಂಬುದಾಗಿ.

✷ ನೀನು ಭಗವದ್ರೂಪದಲ್ಲಿ ಶ್ರದ್ಧೆಯಿಡು. ಬ್ರಹ್ಮಜ್ಞಾನ ದೊರೆತ ನಂತರ ಮಾತ್ರ ಅಭೇದ ಜ್ಞಾನ–ಬ್ರಹ್ಮನಿಗೂ ಶಕ್ತಿಗೂ ಅಭೇದ ಎಂಬ ಜ್ಞಾನ ಉಂಟಾಗುತ್ತದೆ. ಬೆಂಕಿ, ಅದರ ಸುಡುವ ಶಕ್ತಿ ಅನನ್ಯವಾಗಿರುವ ಹಾಗೆ ಬ್ರಹ್ಮ, ಆತನ ಶಕ್ತಿ ಅನನ್ಯ. ಬೆಂಕಿಯನ್ನು ಭಾವಿಸಿದರೆ, ಬೆಂಕಿಯ ಸುಡುವ ಶಕ್ತಿಯನ್ನು ಭಾವಿಸಲೇಬೇಕು; ಮತ್ತೆ ಹಾಲು, ಹಾಲಿನ ಬಿಳುಪು; ನೀರು, ನೀರಿನ ತೋಯುವ ಶಕ್ತಿ; ಇವುಗಳ ಹಾಗೆ ಬ್ರಹ್ಮ, ಆತನ ಶಕ್ತಿ ಅನನ್ಯ.

✷ ಭಗವಂತನ ಕೃಪೆಯಿಂದ ಅಸಂಭವವಾದ್ದೂ ಸಂಭವವಾಗಿ ಬಿಡುತ್ತದೆ.

'ಶ್ರೀರಾಮಕೃಷ್ಣ ವಚನವೇದ'ದಿಂದ